ದಿಃ 13-12-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಎ.ಎ.ಪಿ. ರವರಿಂದಃ-**

**(ಸಾಕ್ಷಿಗೆ ಕನ್ನಡ ಭಾಷೆಯು ಬರದೆ ಇರುವುದರಿಂದ ಹಿಂದಿ ಭಾಷೆಯಲ್ಲಿ ಕೇಳಿದ ಪ್ರಶ್ನೆಗಳನ್ನು ಅರ್ಥೈಸಿಕೊಂಡು ಉಭಯ ಪಕ್ಷಗಾರರ ವಕೀಲರ ಸಹಾಯದ ಮೇರೆಗೆ ತರ್ಜುಮೆ ಮಾಡಿ ಕನ್ನಡ ಭಾಷೆಯಲ್ಲಿ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲಾಯಿತು. ಕನ್ನಡ ಭಾಷೆಗೆ ತರ್ಜುಮೆ ಮಾಡಿ ನೀಡಿದ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲು ಉಭಯ ಪಕ್ಷಗಾರರ ಪರ ವಕೀಲರು ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ.)**

**7.** ಬಾಡಿಗೆ ವ್ಯವಹಾರವು ನಮ್ಮ ಚಿಕ್ಕಪ್ಪರಾದ ಪ್ರಕಾಶ್ ಮತ್ತು ಪ್ರತಿವಾದಿಯ ಮಧ್ಯೆ ಆಗಿತ್ತು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಪ್ರಕಾಶ್ ಮತ್ತು ನಮ್ಮ ಮಧ್ಯೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಶಾಪ್ ನಂ.1 ರ ಬಾಡಿಗೆ ಹಣವು ಚೆಕ್ ಮೂಲಕ ಪ್ರಕಾಶ್ ರವರಿಗೆ ನೀಡಲಾಗುತ್ತಿತ್ತು ಎಂದರೆ ಸಾಕ್ಷಿಯು Sri Ram Construction ರವರಿಗೆ ನೀಡಲಾಗುತ್ತಿತ್ತು ಎಂದು ನುಡಿಯುತ್ತಾರೆ. Sri Ram Construction ಗೆ ಜಮಾ ಆದ ಹಣವನ್ನು ಯಾರು ತೆಗೆಯುತ್ತಿದ್ದರು ಎಂದರೆ ಸಾಕ್ಷಿಯು ಜಂಟಿಯಾಗಿ ತೆಗೆಯಲಾಗುತ್ತಿತ್ತು ಎಂದು ನುಡಿಯುತ್ತಾರೆ. Sri Ram Construction ಖಾತೆಯು ಯಾವ ಬ್ಯಾಂಕಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಬೆಳಗಾಂ ಫಯೋನಿಯರ್ ಅರ್ಬನ್ ಕೋ ಆಪರೇಟಿವ್ ಬ್ಯಾಂಕಿನಲ್ಲಿ ಎಂದು ನುಡಿಯುತ್ತಾರೆ. ನಾನು ಬೆಳಗಾಂ ಫಯೋನಿಯರ್ ಅರ್ಬನ್ ಕೋ ಆಪರೇಟಿವ್ ಬ್ಯಾಂಕಿನ ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

**8.** ನಿಪಿ-8 ರ ದಾಖಲೆಯಲ್ಲಿ ಧನಲಕ್ಷ್ಮಿ ಎಂಟರ್ ಪ್ರೈಸಸ್ ಹೆಸರಿನಲ್ಲಿ 5,000/- ರೂಗಳಂತೆ ಜಮಾ ಮಾಡಲಾಗಿದೆ ಎಂದರೆ ಸರಿ. ನಿಪಿ-8 ರ ದಾಖಲೆಯಲ್ಲಿ ತಲಾ 5,000/- ರೂಗಳಂತೆ ಕ್ಲಿಯರೆನ್ಸ್ ವಿಜಯಾ ಬ್ಯಾಂಕ್, ಧನಲಕ್ಷ್ಮಿ ಎಂದು ತೇವಣಿಯಾದ ಹಣವು ಪ್ರತಿವಾದಿಗೆ ಸಂಬಂಧಪಟ್ಟ ಬಾಡಿಗೆ ಹಣಕ್ಕೆ ಸಂಬಂಧಪಟ್ಟಿರುತ್ತದೆ. ಅದೇ ರೀತಿಯಾಗಿ ನಿಪಿ-8 ರ ಮುಂದುವರೆದ 2014 ರಿಂದ 2017 ರವರೆಗೆ ಪ್ರತಿವಾದಿಯು ಈ ಮೇಲಿನಂತೆ ಬಾಡಿಗೆ

ಹಣವನ್ನು ಶೇವಣಿ ಮಾಡಿರುತ್ತಾರೆ . 2017 ರವರೆಗೆ ಪ್ರತಿವಾದಿಯು ನೀಡಬೇಕಾಗಿರುವ ಬಾಡಿಗೆ ಹಣವು ಸದರಿ ದಾಖಲೆಯು 2017 ರವರೆಗಿನ ಬಾಡಿಗೆಯು ಕ್ಲಿಯರ್ ಎಂದು ತೋರಿಸುತ್ತದೆ ಎಂದರೆ ಸರಿ. ಅದೇ ಪ್ರಕಾರ 2017 ರವರೆಗೆ ಯಾವುದೇ ಬಾಡಿಗೆ ಹಣವು ಪ್ರತಿವಾದಿಯಿಂದ ನೀಡಬೇಕಾಗಿರುವುದಿಲ್ಲ ಎಂದರೆ ಸಾಕ್ಷಿಯು ಇನ್ನೂ ಬಾಡಿಗೆ ಹಣವನ್ನು ಪ್ರತಿವಾದಿಯು ಕೊಡುವುದು ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-8 ರಂತೆ 2017 ರವರೆಗೆ ಪ್ರತಿವಾದಿಯು ಕೊಡಬೇಕಾಗಿರುವ ಬಾಡಿಗೆ ಹಣ ಎಷ್ಟು ಎಂದರೆ ಸಾಕ್ಷಿಯು 3,54,000/- ರೂಗಳು (ಮೂರು ಲಕ್ಷದ ಐವತ್ನಾಲ್ಕು ಸಾವಿರ ರೂಗಳು ) ಎಂದು ನುಡಿಯುತ್ತಾರೆ. 2017 ರಲ್ಲಿ ಪ್ರತಿವಾಯು 3,54,000/- ರೂಗಳು (ಮೂರು ಲಕ್ಷದ ಐವತ್ನಾಲ್ಕು ಸಾವಿರ ರೂಗಳು ) ಬಾಡಿಗೆ ಹಣವನ್ನು ಕೊಡಬೇಕು ಎಂದು ಪ್ರತಿವಾದಿಗೆ ನೋಟಿಸನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಬಾಯಿ ಮಾತಿನಲ್ಲಿ ಕೇಳಿರುತ್ತೇನೆ , ನೋಟಿಸನ್ನು ನೀಡಿರುವುದಿಲ್ಲ , ಆದರೆ ದಾವಾ ದಾಖಲಿಸುವ ಸಂದರ್ಭದಲ್ಲಿ ನೋಟಿಸನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಯು 3,54,000/- ರೂಗಳು (ಮೂರು ಲಕ್ಷದ ಐವತ್ನಾಲ್ಕು ಸಾವಿರ ರೂಗಳು ) ಬಾಡಿಗೆ ಹಣವನ್ನು ಕೊಡಬೇಕಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**9.** ನಿಪಿ-8 ರ ಖಾತೆಯು ಇನ್ನೂ ಚಾಲ್ತಿಯಲ್ಲಿರುತ್ತದೆ ಎಂದರೆ ಸಾಕ್ಷಿಯು ಈಗ ಇರುವುದಿಲ್ಲ, ಯಾವಾಗ ಸ್ಥಗಿತಗೊಂಡಿರುತ್ತದೆ ಎಂದು ಪರಿಶೀಲಿಸಬೇಕು ಎಂದು ನುಡಿಯುತ್ತಾರೆ. ನಿಪಿ-8 ರ ಖಾತೆಯು ಸ್ಥಗಿತಗೊಂಡಿರುವ ಕುರಿತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಖಾತೆಯು ಮುಕ್ತಾಯಗೊಂಡ ನಂತರ ಪ್ರತಿವಾದಿಗೆ ಸದರಿ ವಿಚಾರವನ್ನು ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು ತಿಳಿಸಿರುತ್ತೇನೆ ಎಂದು

ನುಡಿಯುತ್ತಾರೆ. ಈ ರೀತಿಯಾಗಿ ದಾವೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ . Sri Ram Construction ಫರ್ಮ್ ಆಗ ಮುಕ್ತಾಯಗೊಂಡಿರುತ್ತದೆ ಎಂದರೆ ಸರಿ. Sri Ram Construction ಮುಕ್ತಾಯಗೊಂಡ ಬಗ್ಗೆ ನೊಂದಣಿಯಾಗಿದೆಯೇ ಎಂದರೆ ಸಾಕ್ಷಿಯು ಖಾತೆ ಮಾತ್ರ ಮುಕ್ತಾಯಗೊಂಡಿರುತ್ತದೆ , Sri Ram Construction ಇನ್ನೂ ಚಾಲ್ತಿಯಲ್ಲಿರುತ್ತದೆ ಎಂದು ನುಡಿಯುತ್ತಾರೆ. Sri Ram Construction ನ ಖಾತೆಯು ಮುಕ್ತಾಯಗೊಂಡ ನಂತರದ ಬಾಡಿಗೆ ಹಣವನ್ನು ಯಾವ ಖಾತೆಯಲ್ಲಿ ಪಡೆದಿರುತ್ತೀರಿ ಎಂದರೆ ಸಾಕ್ಷಿಯು ಸದರಿ ಖಾತೆಯು ಮುಕ್ತಾಯಗೊಂಡ ನಂತರ ಸದರಿ ಖಾತೆಯಲ್ಲಿ ಹಣವನ್ನು ಸ್ವೀಕರಿಸಿರುವುದಿಲ್ಲ ಎಂದು ನುಡಿಯುತ್ತಾರೆ. Sri Ram Construction ಖಾತೆಯು ಮುಕ್ತಾಯಗೊಂಡ ಕಾರಣ ಪ್ರತಿವಾದಿಯ ವಿರುದ್ಧ ದಾವೆಯನ್ನು ದಾಖಲಿಸಲು ಮತ್ತು ಅವರಿಂದ ಉಳಿದ ಬಾಡಿಗೆ ಹಣವನ್ನು ವಸೂಲಿ ಮಾಡಿಕೊಳ್ಳಲು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

**10.** 2017 ರ ನಂತರ ಪ್ರತಿವಾದಿಯು ವಿಜಯಾ ಬ್ಯಾಂಕ್ ನ ಚೆಕ್ ನ್ನು ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ವಿಜಯಾ ಬ್ಯಾಂಕಿನ ಖಾತೆಯ ಜೆರಾಕ್ಸ್ ಪ್ರತಿಯ ತಃಖ್ತೆಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಪ್ರತಿವಾದಿಯು ದಿನಾಂಕ 10.12.2017 ರಂದು ಪ್ರಕಾಶ್ ರವರ ಹೆಸರಿನಲ್ಲಿ 5,000/- ರೂಗಳನ್ನು ಬಾಡಿಗೆ ಹಣ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಸದರಿ ದಾಖಲೆಯನ್ನು ಗುರುತಿಸಿರುವುದರಿಂದ ಅದನ್ನು ನಿಡಿ -1 ಎಂದು ಗುರುತಿಸಲಾಯಿತು. ದಿನಾಂಕ 30.04.2019 ವರೆಗೆ ಪ್ರತಿವಾದಿಯು ಬಾಡಿಗೆ ಹಣ 5,000/- ಗಳನ್ನು ಪ್ರಕಾಶ್ ರವರ ಹೆಸರಿನಲ್ಲಿ ನೀಡಿದ ಹಣ ವಿತ್ ಡ್ರಾವಲ್ ಆಗಿರುತ್ತದೆ ಎಂದರೆ ಸಾಕ್ಷಿಯು ಕೊನೆಯ ಬಾರಿ ಜಮಾ ಮಾಡಿರುವ ಕುರಿತು ತೋರಿಸುತ್ತದೆ ಎಂದು

ನುಡಿಯುತ್ತಾರೆ. ಪ್ರಕಾಶ್ ರವರ ಖಾತೆಯು ಬ್ಯಾಂಕ್ ಆಫ್ ಬರೋಡದಲ್ಲಿರುತ್ತದೆ. ಪ್ರಕಾಶ್ ರವರ ಬ್ಯಾಂಕ್ ಖಾತೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ಪ್ರತಿವಾದಿಯು ಎಷ್ಟು ಬಾಡಿಗೆ ಹಣವನ್ನು ಪಾವತಿ ಮಾಡಿರುತ್ತಾರೆ ಎಂದು ಗೊತ್ತಾಗುತ್ತದೆ ಎಂದರೆ ಸರಿ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**